

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫತೂಹ್'** ಮಸೀದಿಯಲ್ಲಿ 22–11–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಬದರಿ ಸಹಾಬರಲ್ಲಿ ಒಬ್ಬರಾದ ಹಝ್ರತ್ ಮಿಖ್‌ದಾದ್ ಬಿನ್ ಅಸ್‌ವದ್(ರ) ಬಗ್ಗೆ ಪ್ರಸ್ತಾಪಿಸುವೆನು. ಅವರ ಮೂಲ ಹೆಸರು ಮಿಖ್‌ದಾದ್ ಬಿನ್ ಅಮರ್ ಆಗಿದೆ. ಅವರ ಪಿತನ ಹೆಸರು ಅಮರ್ ಬಿನ್ ಸಅಲಬ ಎಂದಾಗಿತ್ತು. ಹಝ್ರತ್ ಮಿಖ್‌ದಾದರನ್ನು ಅಸ್‌ವದ್ ಬಿನ್ ಯಗೂಸರೊಂದಿಗೆ ಸಂಬಂಧ ಸೂಚಿಸಲಾಗುತ್ತಿತ್ತು. ಏಕೆಂದರೆ ಅಸ್‌ವದ್ ಬಾಲ್ಯದಲ್ಲಿಯೇ ಅವರನ್ನು ತನ್ನ ಸಾಕು ಪುತ್ರನನ್ನಾಗಿ ಮಾಡಿದ್ದರು. ಆದುದರಿಂದ ಮಿಖ್‌ದಾದ್ ಬಿನ್ ಅಸ್‌ವದ್ ಎಂಬ ಹೆಸರಲ್ಲಿ ಪರಿಚಯಿಸಲ್ಪಟ್ಟರು. ಆದರೆ ಅಲ್ಲಾಹನ ಆಜ್ಞೆ **ಉದ್‌ಊಹುಮ್ ಲಿ ಆಬಾಯಿಹಿಮ್** ಪ್ರಕಾರ ಸಾಕುತಂದೆ ಸಹ ಮೂಲ ತಂದೆಯ ಹೆಸರು ಹೇಳಿ ತನ್ನ ಸಾಕು ಮಗನನ್ನು ಸಂಭೋಧಿಸಬೇಕು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಚಿಕ್ಕಪ್ಪ ಹಝ್ರತ್ ಝುಬೈರ್ ಬಿನ್ ಅಬ್ದುಲ್ ಮತ್ತಲಿಬ್‌ರ ಪುತ್ರಿ ಝುಬಾಅತರೊಂದಿಗೆ ಮಿಖ್‌ದಾದರ ವಿವಾಹ ನಡೆಸಿದರು. ಅದರಿಂದ ಅವರಿಗೆ ಕರೀಮ ಮತ್ತು ಅಬ್ದುಲ್ಲಾ ಎಂಬ ಇಬ್ಬರು ಮಕ್ಕಳು ಜನಿಸಿದರು. ಅಬ್ದುಲ್ಲ ಜಮಲ್ ಯುದ್ಧದಲ್ಲಿ ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ಪರವಾಗಿ ಹೋರಾಡುತ್ತಾ ಶಹೀದರಾದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝುಬಾಅತರಿಗೆ ಖೈಬರ್ ಜಯಿಸಿದಾಗ ನಲ್ವತ್ತು ವಸಖ್ ಖರ್ಜೂರ ನೀಡಿದರು. ಅದು ಅಂದಾಜು ಆರು ನೂರು ಕಿಲೋಗಳಷ್ಟಾಗುತ್ತದೆ. ಹಝ್ರತ್ ಮಿಖ್‌ದಾದ್‌ರ ಪುತ್ರಿ ಕರೀಮ ತನ್ನ ಪಿತನ ದೇಹ ಪ್ರಕೃತಿ ಬಗ್ಗೆ ಹೀಗೆ ಹೇಳುತ್ತಾರೆ: ಅವರು ಎತ್ತರವಾದ ಶರೀರವನ್ನು ಮತ್ತು ಗೋಧಿ ವರ್ಣವನ್ನು ಹೊಂದಿದ್ದರು. ಹೊಟ್ಟೆ ದೊಡ್ಡದಾಗಿತ್ತು. ತಲೆಯಲ್ಲಿ ತುಂಬಾ ಕೂದಲಿತ್ತು. ಅವರು ತನ್ನ ಗಡ್ಡಕ್ಕೆ ಹಳದಿ ಬಣ್ಣ ಹಚ್ಚುತ್ತಿದ್ದರು. ಅದು ಸುಂದರವಾಗಿತ್ತು. ಅದು ಉದ್ದವೂ ಆಗಿರಲಿಲ್ಲ. ಗಿಡ್ಡವೂ ಆಗಿರಲಿಲ್ಲ. ಅವರ ಕಣ್ಣುಗಳು ಕಪ್ಪಾಗಿದ್ದುವು. ಅವರ ಹುಬ್ಬುಗಳು ಅಗಲ ಕಿರಿದಾಗಿ ನೀಳವಾಗಿದ್ದುವು.

ಹಝ್ರತ್ ಅಬ್ದುಲ್ಲ ಬಿನ್ ಮಸ್‌ಊದ್ ಹೇಳುತ್ತಾರೆ: ಮಕ್ಕದಲ್ಲಿ ತಾವು ಇಸ್ಲಾಮ್ ಧರ್ಮ ಸ್ವೀಕರಿಸಿರುವೆವು ಎಂದು ಎಲ್ಲರಿಗಿಂತ ಮೊದಲು ಘೋಷಿಸಿದ ಏಳು ಜನರಲ್ಲಿ ಹಝ್ರತ್ ಮಿಖ್‌ದಾದ್ ಒಬ್ಬರಾಗಿದ್ದರು. ಅಬಿಸೀನಿಯಾ ದೇಶಕ್ಕೆ ವಲಸೆ ಹೋದ ಮುಸ್ಲಿಮರಲ್ಲಿ ಹಝ್ರತ್ ಮಿಖ್‌ದಾದ್ ಸಹ ಸೇರಿದ್ದರು. ಸ್ವಲ್ಪ ಕಾಲದ ನಂತರ ಅವರು ಮಕ್ಕಕ್ಕೆ ಮರಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಹಿಜ್ರತ್ ಮಾಡಿದಾಗ ಹಝ್ರತ್ ಮಿಖ್‌ದಾದರಿಗೆ ಹಿಜ್‌ರತ್ ಮಾಡಲಾಗಲಿಲ್ಲ. ಅವರು ಮಕ್ಕದಲ್ಲಿಯೇ ಉಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ ಬಿನ್ ಹಾರಿಸರ ನೇತೃತ್ವದಲ್ಲಿ ಒಂದು ತಂಡವನ್ನು ಕಳುಹಿಸುವ ತನಕ ಅವರು ಮಕ್ಕದಲ್ಲೇ ವಾಸಿಸಿದರು.

ವದಾನ್ ಯುದ್ಧದಿಂದ ಮರಳಿ ಬಂದಾಗ ರಬೀಉಲ್ ಅವ್ವಲ್ ತಿಂಗಳ ಆರಂಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಮೀಪದ ಸಂಬಂಧಿಯಾಗಿದ್ದ ಉಬೈದ್ ಬಿನ್ ಹಾರಿಸ್‌ರ ನೇತೃತ್ವದಲ್ಲಿ ಅರುವತ್ತು ಎಪ್ಪತ್ತು ಮುಹಾಜಿರ್‌ಗಳ ಒಂದು ಸೇನಾದಳವನ್ನು ಕಳುಹಿಸಿದರು. ಮಕ್ಕದ ಖುರೈಶಿಗಳ ಆಕ್ರಮಣವನ್ನು ತಡೆಯುವುದು ಅದರ ಉದ್ದೇಶವಾಗಿತ್ತು. ಹಝ್ರತ್ ಉಬೈದ ಬಿನ್ ಹಾರಿಸ್ ಮತ್ತು ಅವರ ಜೊತೆಗಾರರು ಸ್ವಲ್ಪ ದೂರ ಪ್ರಯಾಣಿಸಿ ಸನಿಯತುಲ್‌ಮರ ಸಮೀಪ ತಲಪಿದಾಗ, ಇನ್ನೂರು ಆಯುಧ ಸನ್ನದ್ಧರಾದ ಸೈನಿಕರು ಇಕ್ರಿಮ ಬಿನ್ ಅಬೂಜಹಲನ ನೇತೃತ್ವದಲ್ಲಿ ಅಲ್ಲಿ ಶಿಬಿರ ಹೂಡಿರುವುದನ್ನು ಕಂಡರು. ಎರಡು ದಳಗಳು ಒಬ್ಬರಿನ್ನೊಬ್ಬರಿಗೆ ಎದುರಾದರು. ಸ್ವಲ್ಪ ಬಾಣ ಪ್ರಯೋಗ ಸಹ ನಡೆಯಿತು. ಆದರೆ ಬಹುದೈವಾರಾಧಕರು ಹೆದರಿದರು, ಮುಸ್ಲಿಮ್ ಸೇನಾದಳದ ಹಿಂದಿನಿಂದ ಹೆಚ್ಚು ಸಹಾಯಕ ಸೈನಿಕ ದಳವಿರಬಹುದು ಎಂದು ಅವರು ಭಾವಿಸಿದರು. ಆದುದರಿಂದ ಅವರು ಹೋರಾಡದೆ ಹಿಂದೆ ಸರಿದರು. ಆಗ ಮುಸ್ಲಿಮರು ಅವರನ್ನು ಬೆನ್ನಟ್ಟಲಿಲ್ಲ. ಆದರೆ ಬಹುದೇವಾರಾಧಕರ ಸೈನ್ಯದಿಂದ ಮಿಖ್‌ದಾದ್ ಬಿನ್ ಅಮರ್ ಮತ್ತು ಉತ್‌ಬ ಬಿನ್ ಗಝ್‌ವಾನ್ ಓಡಿ ಬಂದು ಮುಸ್ಲಿಮರ ಜೊತೆ ಸೇರಿದರು. ಅವರಿಬ್ಬರು ಹೃದಯದಲ್ಲಿ ಮುಸ್ಲಿಮರಾಗಿದ್ದ ಕಾರಣ, ಸಂದರ್ಭ ಸಿಗುವಾಗ ಮುಸ್ಲಿಮರ ಜೊತೆ ಸೇರಲಿಕ್ಕಾಗಿಯೇ ಅವರು ಖುರೈಶಿಗಳೊಂದಿಗೆ ಹೊರಟಿದ್ದರು ಎಂದು ಹೇಳಲಾಗುತ್ತದೆ.

ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ಮಿಖ್‌ದಾದ್ ಹಝ್ರತ್ ಕುಲ್‌ಸುಮ್ ಬಿನ್ ಹದಮ್‌ರ ಮನೆಯಲ್ಲಿ ತಂಗಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮಿಖ್‌ದಾದ್ ಮತ್ತು ಹಝ್ರತ್ ಜಬ್ಬಾರ್ ಬಿನ್ ಸಖ್‌ರ್ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮಿಖ್‌ದಾದ್‌ರಿಗೆ ಅನ್‌ಸಾರ್‌ಗಳ ಖಝ್‌ರಜ್ ಗೋತ್ರದ ಒಂದು ಶಾಖೆಯಾದ ಬನೂ ಹದೀಲದ ಬಡಾವಣೆಯಲ್ಲಿ ವಾಸಿಸಲು ಸ್ಥಳ ನೀಡಿದರು. ಹಝ್ರತ್ ಮಿಖ್‌ದಾದ್ ಬದರ್, ಉಹುದ್, ಖಂದಕ್

ಸಮೇತ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಭಾಗವಹಿಸಿದ್ದರು. ಹಝ್ರತ್ ಮಿಖ್ದಾದ್ ಬಾಣ ಹೂಡುವ ನಿಷ್ಣಾತರಲ್ಲಿ ಒಬ್ಬರಾಗಿದ್ದರು.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬದರ್ ಯುದ್ಧದ ಬಗ್ಗೆ ಹೀಗೆ ಬರೆಯಲಾಗಿದೆ: ಶತ್ರುಗಳ ಬಗ್ಗೆ ಸಮಾಚಾರ ಲಭಿಸಿದಾಗ ಅವರ ಇರಾದೆ ಏನೆಂದು ತಿಳಿಯಲು ಮತ್ತು ಅವರು ಆಕ್ರಮಣ ಮಾಡುವುದಾದರೆ ಆಕ್ರಮಣವನ್ನು ತಡೆಯಲು ಬದರ್ ಕಡೆಗೆ ಹೊರಟರು. ರೌಹ ಎಂಬಲ್ಲಿಗೆ ತಲಪಿದಾಗ ಬಸೀಸ್ ಮತ್ತು ಅದೀ ಎಂಬ ಇಬ್ಬರು ಸಹಾಬರನ್ನು ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶತ್ರುಗಳ ಚಲನವಲನೆಗಳನ್ನು ತಿಳಿಯಲು ಬದರ್ ಕಡೆಗೆ ಕಳುಹಿಸಿ ಅವರು ಬೇಗನೆ ಸಮಾಚಾರ ತಿಳಿದು ಮರಳಬೇಕೆಂದು ಆಜ್ಞಾಪಿಸಿದರು. ಅವರು ರೌಹದಿಂದ ಹೊರಟು ವಾದಿ ಸಫ್ರಾದ ಒಂದು ಬದಿಯಿಂದ ಮುಂದೆ ಸಾಗುತ್ತಾ ಝುಫ್ರಾನ್ ಎಂಬ ಸ್ಥಳಕ್ಕೆ ತಲಪಿದರು. ಅದು ಬದರ್‌ನಿಂದ ಒಂದು ತಂಗುದಾಣದಷ್ಟು ದೂರವಿದ್ದ ಸ್ಥಳವಾಗಿತ್ತು. ಅಲ್ಲಿ ಸಮಾಚಾರ ಲಭಿಸಿತು – ವ್ಯಾಪಾರಿ ಸಂಘದ ಸಂರಕ್ಷಣೆಗೆ ಖುರೈಶಿಗಳ ಒಂದು ದೊಡ್ಡ ಶಸ್ತ್ರ ಸಜ್ಜಿತ ಸೈನ್ಯ ಮಕ್ಕದಿಂದ ಆಗಮಿಸುತ್ತಿದೆ ಎಂದು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಲ್ಲಾ ಸಹಾಬರನ್ನು ಜಮಾಯಿಸಿ ಅವರಿಗೆ ಈ ಸಮಾಚಾರ ತಿಳಿಸಿ ಈಗ ಏನು ಮಾಡಬೇಕು ಎಂದು ಸಲಹೆ ಕೇಳಿದರು.

ಹಿರಿಯ ಸಹಾಬರು ಎದ್ದು ನಿಂತು ಆತ್ಮ ಸಮರ್ಪಣೆ ಮಾಡುವ ಭಾಷಣ ಮಾಡಿದರು. ನಮ್ಮ ಜೀವ ಮತ್ತು ಸಂಪತ್ತು ಅಲ್ಲಾಹನದಾಗಿವೆ. ನಾವು ಪ್ರತಿಯೊಂದು ಕ್ಷೇತ್ರದಲ್ಲಿ ಪ್ರತಿಯೊಂದು ಸೇವೆ ಮಾಡಲು ಹಾಜರಾಗುವೆವು ಎಂದು ಹೇಳಿದರು. ಮಿಖ್ದಾದ್ ಬಿನ್ ಅಮರ್ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ನಾವು ಪ್ರವಾದಿ ಮೂಸಾರವರ ಸಂಗಡಿಗರ ಹಾಗೆ ಅಲ್ಲ. 'ನೀನು ಮತ್ತು ನಿನ್ನ ದೇವರು ಹೋಗಿ ಯುದ್ಧ ಮಾಡಿರಿ ನಾವು ಇಲ್ಲೇ ಕೂತಿರುವೆವು' ಎಂದು ಅವರು ಹೇಳಿದಂತೆ ನಾವು ಹೇಳಲಾರೆವು. ನಾವು ಹೇಳುವುದು, ನೀವು ಎಲ್ಲಿಗೆ ಬೇಕಾದರೂ ಹೋಗಿರಿ ನಾವು ನಿಮ್ಮ ಜೊತೆಗಿರುವೆವು. ನಾವು ನಿಮ್ಮ ಎಡ ಬಲಗಳಲ್ಲಿಯೂ ನಿಮ್ಮ ಮುಂದೆಯೂ ಹಿಂದೆಯೂ ನಿಂತು ಹೋರಾಡುವೆವು. ಈ ಭಾಷಣ ಆಲಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಾರವಿಂದ ಸಂತೋಷ ಭರಿತವಾಗಿ ಅರಳಿತು.

ಹಝ್ರತ್ ಮಿಖ್ದಾದ್ ಬದರ್ ಯುದ್ಧದಲ್ಲಿ ಅಲ್ಲಾಹನ ಮಾರ್ಗದಲ್ಲಿ ಪ್ರಥಮ ಕುದುರೆ ಸವಾರನಾಗಿ ಯುದ್ಧ ಮಾಡಿದ ಯೋಧನಾಗುವ ಭಾಗ್ಯ ಗಳಿಸಿದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ತನ್ನ ಗ್ರಂಥವಾದ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬರೆದಿದ್ದಾರೆ. ಬದರ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮರ ಹತ್ತಿರ ಬರೇ ಎರಡು ಕುದುರೆಗಳಿದ್ದುವು. ಮುಸ್ಲಿಮರ ಬಳಿಯಿದ್ದ ಆಯುಧ ಬಹುದೇವಾರಾಧಕರು ಹೊಂದಿದ್ದ ಆಯುಧದೊಂದಿಗೆ ಹೋಲಿಸಿದರೆ ನಗಣ್ಯವಾಗಿತ್ತು. ಹೀಗಿದ್ದರೂ ಶತ್ರುಗಳ ವಿರುದ್ಧ ಹೋರಾಡಿದಾಗ ಮುಹಾಜಿರ್‌ಗಳು ಮತ್ತು ಅನ್‌ಸಾರ್‌ಗಳು ತಾವು ಮಾಡಿದ ಪ್ರತಿಜ್ಞೆಗಳನ್ನು ಈಡೇರಿಸಿ ತೋರಿಸಿದರು.

ಒಮ್ಮೆ ಹಝ್ರತ್ ಮಿಖ್ದಾದ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಿದರು: ಅಲ್ಲಾಹನ ಸಂದೇಶವಾಹಕರೇ, ನಾನು ಒಬ್ಬ ಅವಿಶ್ವಾಸಿಯೊಂದಿಗೆ ಹೋರಾಡುವಾಗ ಅವನು ನನ್ನ ಒಂದು ಕೈಯನ್ನು ಕತ್ತರಿಸಿ ಅನಂತರ ಒಂದು ಮರದ ಹಿಂದೆ ಅವಿತುಕೊಂಡು 'ನಾನು ಅಲ್ಲಾಹನಿಗೋಸ್ಕರ ಮುಸ್ಲಿಮನಾದೆನು' ಎಂದು ಹೇಳಿದರೆ ನಾನು ಅವನನ್ನು ಅವನು ಆ ಮಾತು ಹೇಳಿದ ನಂತರ ಕೊಲ್ಲಬಹುದೇ? ಅವರು ಹೇಳಿದರು: ನೀನು ಅವನನ್ನು ಕೊಲ್ಲಬೇಡ. ಹಝ್ರತ್ ಮಿಖ್ದಾದ್ ಹೇಳಿದರು: ಅವನು ನನ್ನ ಒಂದು ಕೈಯನ್ನು ಕತ್ತರಿಸಿರುವನು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀನು ಅವನನ್ನು ಕೊಲ್ಲಬಾರದು. ನೀನು ಕೊಂದರೆ ನೀನು ಅವನನ್ನು ಕೊಲ್ಲುವ ಮೊದಲು ಯಾವ ಪದವಿಯಲ್ಲಿದ್ದಿಯೋ ಅದನ್ನು ಅವನು ಗಳಿಸುವನು. ಎಂದರೆ ಸತ್ಯವಿಶ್ವಾಸಿಯ ಪದವಿ ಗಳಿಸುವನು. ನೀನು ಅವನನ್ನು ಕೊಂದರೆ ಅವನು ಕಲಿಮ ಉಚ್ಚರಿಸುವ ಮೊದಲು ಯಾವ ಪದವಿ ಹೊಂದಿದ್ದನೋ ಆ ಪದವಿ ನಿನ್ನದಾಗುವುದು. ಕಲಿಮ ಉಚ್ಚರಿಸುವವರಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನೀಡಿರುವ ಪದವಿಯಿದು. ಅದನ್ನು ಇಂದಿನ ಆಲಿಮ್ ನಾಮಧಾರಿಗಳ ಮತ್ತು ಸರಕಾರಗಳ ವರ್ತನೆಗಳೊಂದಿಗೆ ಹೋಲಿಸಿ ನೋಡಿರಿ. ಈ ಹದೀಸ್ ಪ್ರಕಾರ ಅವರು ಯಾವ ಸ್ಥಾನದಲ್ಲಿರುವರೆಂದು ಅವರು ನೋಡಿಕೊಳ್ಳಲಿ – ಅವರು ಮೂಮಿನ್ ಸ್ಥಾನದಲ್ಲಿರುವರೋ ಕಾಫಿರ್ ಸ್ಥಾನದಲ್ಲಿರುವರೋ ಎಂದು.

ಬನೂ ಖಝಾರ ಗೋತ್ರದ ಅಯೀನ ಬಿನ್ ಹಸನ್ ಬನೂ ಗತ್‌ಫಾನರ ಕುದುರೆ ಸವಾರರ ಜೊತೆ ಸೇರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂಟೆಗಳನ್ನು ಕದ್ದುಕೊಂಡು ಹೋದರಲ್ಲದೆ ಹುಲ್ಲುಗಾವಲಿನಲ್ಲಿ ಒಂಟೆ ಮೇಯಿಸುವವನನ್ನೂ ಕೊಂದರು. ಹಝ್ರತ್ ಸಲ್ಮಾ ಬಿನ್ ಅಕೂಅ್ ಅವರನ್ನು ಬೆನ್ನಟ್ಟಿದ್ದರು ಮತ್ತು ಅವರ ಮೇಲೆ ಬಾಣ ಹೂಡಿದರು. ಹಝ್ರತ್ ಸಲ್ಮಾ ನೆರವನ್ನು ಬೇಡಿದ ಕೂಗನ್ನು ಆಲಿಸಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಲ್ಲಿ ಪ್ರಕಟಿಸಿದರು, ಶತ್ರುಗಳನ್ನು ಎದುರಿಸಲು ಹೊರಡಿರಿ ಎಂದು. ಆಗ ಎಲ್ಲರಿಗಿಂತ ಮೊದಲು ಆಗಮಿಸಿದ ಕುದುರೆ ಸವಾರ ಹಝ್ರತ್ ಮಿಖ್ದಾದ್ ಆಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕವನ್ನು ಪ್ರವೇಶಿಸಲು ಸಿದ್ಧತೆಗಳನ್ನು ನಡೆಸುತ್ತಿದ್ದಾಗ ಆ ಯೋಜನೆಯನ್ನು ರಹಸ್ಯವಾಗಿರಿಸಿದ್ದರು. ಆಗ ಒಬ್ಬ ಬದರಿ ಸಹಾಬಿ ಹಾತಿಬ್ ಬಿನ್ ಬಲ್‌ತಅ ಎಂಬವರು ತನ್ನ ಅವಿವೇಕತನದಿಂದ, ಮಕ್ಕದಿಂದ ಆಗಮಿಸಿದ ಒಬ್ಬ ಮಹಿಳೆಯ ಕೈಯಲ್ಲಿ ಒಂದು ರಹಸ್ಯ ಪತ್ರ ರವಾನಿಸಿದರು. ಅದರಲ್ಲಿ ಮಕ್ಕವನ್ನು ಆಕ್ರಮಿಸಲು ಮಾಡಿದ ಎಲ್ಲಾ ಸಿದ್ಧತೆಗಳ ವಿವರಣೆಗಳಿದ್ದುವು. ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದರ ವಿವರ ನೀಡಿದಾಗ ಅವರು ಹಝ್ರತ್ ಅಲಿ, ಝುಬೈರ್ ಮತ್ತು ಮಿಖ್ದಾದರನ್ನು ಆ ಮಹಿಳೆಯಿಂದ ಆ ಪತ್ರವನ್ನು ತೆಗೆದುಕೊಂಡು ಬರಲು ಕಳುಹಿಸಿದರು. ಹಝ್ರತ್ ಅಲಿ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

ಹೇಳಿದರು: ರೌಝುತು ಖಾಖ್ ಎಂಬಲ್ಲಿ ಆ ಮಹಿಳೆ ನಿಮಗೆ ಕಾಣಲು ಸಿಗುವಳು. ನಾವು ಆ ಮಹಿಳೆ ಬಳಿಗೆ ತಲಪಿ ಆ ಪತ್ರವನ್ನು ಅವಳಿಂದ ಪಡೆದುಕೊಂಡು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಅವರಿಗೆ ನೀಡಿದೆವು.

ಯರ್ಮೂಕ್ ಯುದ್ಧದಲ್ಲಿ ಹಝ್ರತ್ ಮಿಖ್‌ದಾದ್ ಭಾಗವಹಿಸಿದ್ದರು. ಅವರು ಆ ಯುದ್ಧದಲ್ಲಿ ಖಾರಿ ಆಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸೇನಾದಳದ ಅಮೀರರನ್ನಾಗಿ ಹಝ್ರತ್ ಮಿಖ್‌ದಾದರನ್ನು ನೇಮಿಸಿದ್ದರು. ಅವರು ಯುದ್ಧದಿಂದ ಮರಳಿ ಬಂದಾಗ ಅವರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ಅಬೂ ಮಅ್‌ಬದ್, ನೀನು ನಿನ್ನ ಇಮಾರತ್ (ನೇತೃತ್ವ) ಪದವಿಯನ್ನು ಹೇಗೆ ಮನವರಿಕೆ ಮಾಡಿದೆ. ಹಝ್ರತ್ ಮಿಖ್‌ದಾದ್ ಹೇಳಿದರು: ಯಾ ರಸೂಲುಲ್ಲಾಹ್, ನಾನು ಸೇನಾ ದಳದೊಂದಿಗೆ ಹೊರಟಾಗ ಅನ್ಯರನ್ನು ನನ್ನ ಗುಲಾಮರನ್ನಾಗಿ ಭಾವಿಸುತ್ತಿದ್ದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇಮಾರತ್ ಇದೇ ರೀತಿ ಆಗಿರುತ್ತದೆ. ಆದರೆ ಯಾರನ್ನು ಅಲ್ಲಾಹನು ಈ ಕೆಡುಕಿನಿಂದ ರಕ್ಷಿಸುತ್ತಾನೋ ಅವನು ಇದಕ್ಕೆ ಹೊರತಾಗಿರುವನು. ಹಝ್ರತ್ ಮಿಖ್‌ದಾದ್ ಹೇಳಿದರು: ತಮ್ಮನ್ನು ಪ್ರವಾದಿಯಾಗಿ ನಿಯೋಜಿಸಿ ಕಳುಹಿಸಿದ ಅಲ್ಲಾಹನಾಣೆ ನಾನು ಇಬ್ಬರ ಮೇಲೆ ಸಹ ಮೇಲ್ವಿಚಾರಕನಾಗಲು ಇಷ್ಟಪಡುವುದಿಲ್ಲ.

ಇದು ಆ ಜನರ ತಖ್ವದ ಮಟ್ಟವಾಗಿದೆ. ಮೇಲಧಿಕಾರಿಯಾಗುವಾಗ ಅಹಂಭಾವ ತಲೆದೋರುತ್ತದೆ. ಆದುದರಿಂದ ಇಬ್ಬರು ಸಹ ನನ್ನ ಅಧೀನದಲ್ಲಿರುವುದನ್ನು ನಾನು ಇಷ್ಟಪಡುವುದಿಲ್ಲ ಎಂದು ಹಝ್ರತ್ ಮಿಖ್‌ದಾದ್ ಹೇಳಿದರು. ನಮ್ಮ ಎಲ್ಲಾ ಮೇಲಧಿಕಾರಿಗಳು ಯಾವಾಗಲೂ ನೆನಪಿಡಬೇಕಾದುದೇನೆಂದರೆ ಅವರು ಅಧಿಕಾರಿಗಳಾಗಲು ಇಚ್ಛಿಸಬಾರದು. ಆದರೆ ಅವರನ್ನು ಅಧಿಕಾರಿಯನ್ನಾಗಿ ಮಾಡಿದಾಗ, ಅವರಿಗೆ ಹುದ್ದೆ ನೀಡಿದಾಗ, ಅವರು ಅಲ್ಲಾಹನಿಂದ ಆ ಹುದ್ದೆಯ ಕೆಡುಕಿನಿಂದ ರಕ್ಷಿಸಲ್ಪಡಲು ಪ್ರಾರ್ಥಿಸಬೇಕು. ತನ್ನಲ್ಲಿ ಎಂದೂ ಅಹಂಭಾವ ಹುಟ್ಟದಿರುವಂತೆ ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕು ಮತ್ತು ಅವನ ಅನುಗ್ರಹಗಳನ್ನು ಬೇಡುತ್ತಾ ಇರಬೇಕು.

ಹಮ್ಸ್ ನಗರಕ್ಕೆ ಮುತ್ತಿಗೆ ಹಾಕಿದಾಗ ಹಝ್ರತ್ ಮಿಖ್‌ದಾದ್ ಹಝ್ರತ್ ಉಬೈದ ಬಿನ್ ಜರಾಹ್‌ರೊಂದಿಗೆ ಇದ್ದರು. ಈಜಿಪ್ಟನ್ನು ಜಯಿಸುವಾಗ ಅದರಲ್ಲಿ ಸಹ ಹಝ್ರತ್ ಮಿಖ್‌ದಾದ್(ರ) ಭಾಗವಹಿಸಿದ್ದರು. ಜುಬೈರ್ ಬಿನ್ ನಫೀರ್ ಹೇಳುತ್ತಾರೆ: ಹಝ್ರತ್ ಮಿಖ್‌ದಾದ್ ನಮ್ಮ ಬಳಿಗೆ ಬಂದು ಹೇಳಿದರು: ಅಲ್ಲಾಹನಾಣೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದುದನ್ನು ನಾನು ಆಲಿಸಿದೆ. ಕಲಹಗಳಿಂದ ರಕ್ಷಿಸಲ್ಪಟ್ಟವನು ಭಾಗ್ಯಶಾಲಿ. ಯಾವುದಾದರೂ ಪರೀಕ್ಷೆಗೆ ಪಾತ್ರರಾದರೆ ಸಹನೆ ದೋರಬೇಕು.

ಹಝ್ರತ್ ಮಿಖ್‌ದಾದರ ಹೊಟ್ಟೆ ಬಹಳ ಹೆಚ್ಚು ಉಬ್ಬಿತ್ತು. ಅವರ ಒಬ್ಬ ರೂಮೀ ಸೇವಕ ಅವರೊಂದಿಗೆ ಹೇಳಿದನು: ನಾನು ನಿಮ್ಮ ಹೊಟ್ಟೆ ಸೀಳಿ ಚರ್ಬಿಯನ್ನು ತೆಗೆದು ಹಾಕುತ್ತೇನೆ ಎಂದು. ಅವನು ಅವರ ಹೊಟ್ಟೆಯಿಂದ ಚರ್ಬಿ ತೆಗೆದು ಪುನಃ ಹೊಲಿದನು. ಆದರೆ ಹಝ್ರತ್ ಮಿಖ್‌ದಾದ್ ಆ ಕಾರಣದಿಂದ ನಿಧನ ಹೊಂದಿದರು. ಇನ್ನೊಂದು ವರದಿ ಹೀಗಿದೆ: ಹಝ್ರತ್ ಮಿಖ್‌ದಾದ್ ಕ್ಯಾಸ್ಟರ್ ಆಯಿಲ್ (ಹರಳೆಣ್ಣೆ) ಕುಡಿದುದರಿಂದ ಮೃತರಾದರು ಎಂದು. ಇನ್ನೊಂದು ವರದಿ ಇದೆ, ಅಬೂ ಫಾಯಿದ್ ವರದಿ ಮಾಡುತ್ತಾರೆ: ಹಝ್ರತ್ ಮಿಖ್‌ದಾದರ ಪುತ್ರಿ ಕರೀಮ ಹೇಳುತ್ತಾರೆ: ಹಝ್ರತ್ ಮಿಖ್‌ದಾದ್ ಮದೀನದಿಂದ ಮೂರು ಮೈಲು ದೂರವಿರುವ ಜರಫ್ ಎಂಬಲ್ಲಿ ನಿಧನ ಹೊಂದಿದರು. ಅವರ ಮೃತ ಶರೀರವನ್ನು ಜನರು ಭುಜದಲ್ಲಿ ಹೊತ್ತುಕೊಂಡು ಮದೀನಕ್ಕೆ ತಂದರು. ಹಝ್ರತ್ ಉಸ್ಮಾನ್ ಅವರ ಜನಾಝ ನಮಾಝ್ ನಿರ್ವಹಿಸಿದರು. ಜನ್ನತುಲ್ ಬಖೀಅ್ ಖಬರಸ್ಥಾನದಲ್ಲಿ ದಫನುಗೊಳಿಸಲ್ಪಟ್ಟರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನು ನನ್ನೊಂದಿಗೆ ನಾಲ್ವರನ್ನು ಪ್ರೀತಿಸಲು ಆಜ್ಞಾಪಿಸಿದ್ದಾನೆ. ಅಲ್ಲಾಹನು ಸಹ ಅವರನ್ನು ಪ್ರೀತಿಸುತ್ತಾನೆಂದು ಅವನು ನನ್ನೊಂದಿಗೆ ಹೇಳಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಲಾಯಿತು ಅವರು ಯಾರು? ಎಂದು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲಿ, ಅಬೂದರ್, ಸಲ್ಮಾನ್ ಮತ್ತು ಮಿಖ್‌ದಾದ್.

ಹಝ್ರತ್ ಅಲಿ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಪ್ರತಿ ಪ್ರವಾದಿಗೆ ಏಳು ಏಳು ನಿಕಟ ಸಂಗಡಿಗರನ್ನು ನೀಡಲಾಗುತ್ತಿದೆ. ಆದರೆ ನನಗೆ ಹದಿನಾಲ್ಕು ಜನರು ಲಭಿಸಿದ್ದಾರೆ. ನಾವು ಕೇಳಿದೆವು, ಅವರು ಯಾರ್ಯಾರು. ಹಝ್ರತ್ ಅಲಿ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲಿ, ಹಸನ್, ಹುಸೈನ್, ಜಅಫರ್, ಹಮ್‌ಝ, ಅಬೂಬಕರ್, ಉಮರ್, ಮುಸ್‌ಇಬ್ ಬಿನ್ ಉಮೈರ್, ಬಿಲಾಲ್, ಸಲ್ಮಾನ್, ಅಮ್ಮಾರ್, ಮಿಖ್‌ದಾದ್, ಹುಝೈಫ, ಅಬೂದರ್ ಮತ್ತು ಅಬ್ದುಲ್ಲ ಬಿನ್ ಮಸ್‌ಊದ್.

ಹಝ್ರತ್ ಮಿಖ್‌ದಾದ್ ವರದಿ ಮಾಡುತ್ತಾರೆ: ಒಂದು ದಿವಸ ನಾನು ಬಹಿರ್ದೆಸೆಗೆ ಹೋದಾಗ ಒಂದು ಇಲಿಯನ್ನು ಕಂಡೆನು. ಅದು ತನ್ನ ಬಿಲದಿಂದ ಒಂದು ದೀನಾರ್ ಹೊರಗೆ ತಂದಿಟ್ಟು ಒಳಗೆ ಹೋಯಿತು. ಅನಂತರ ಇನ್ನೊಂದು ದೀನಾರ್ ಹೊರಗೆ ತಂದಿತು. ಅದು ಒಟ್ಟಿಗೆ ಹದಿನೇಳು ದೀನಾರ್ ಹೊರಗೆ ತಂದಿತು. ಅನಂತರ ಅದು ಒಂದು ಕೆಂಪು ಬಟ್ಟೆ ಹೊರಗೆ ತಂದಿತು. ಆ ಬಟ್ಟೆಯನ್ನು ನಾನು ಎಳೆದಾಗ ಅದರಲ್ಲಿ ಒಂದು ದೀನಾರ್ ಕಂಡೆನು. ಈರೀತಿ ಹದಿನೆಂಟು ದೀನಾರ್‌ಗಳಾದುವು. ನಾನು ಅವುಗಳನ್ನು ತೆಗೆದುಕೊಂಡು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದೆನು. ಅವರಿಗೆ ಎಲ್ಲಾ ವಿಷಯ ತಿಳಿಸಿದೆ. ನಾನು ಹೇಳಿದೆ: ಇದನ್ನು ಸದಖಾವಾಗಿ ತೆಗೆದುಕೊಳ್ಳಿರಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅದು ಸದಖಾವಾಗಿ ಕೊಡಬೇಕಾಗಿಲ್ಲ. ನೀನು ತೆಗೆದುಕೊಂಡು ಹೋಗು. ಅಲ್ಲಾಹನು ನಿನಗೆ ಅವುಗಳಲ್ಲಿ ಅನುಗ್ರಹ ನೀಡಲಿ. ಹಝ್ರತ್ ಮಿಖ್‌ದಾದ್ ಹೇಳಿದರು: ಈರೀತಿ ಅಲ್ಲಾಹನು ನನಗೆ ಸಹಾಯದ ವ್ಯವಸ್ಥೆ ಮಾಡಿದನು.

(ಖುತ್‌ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಒಂದು ದುಆವನ್ನು ಯಾವಾಗಲೂ ಮಾಡುತ್ತಾ ಇರಬೇಕು. ಅದರ ಮೂಲಕ ಮುಂದಿನ ಪೀಳಿಗೆಯಲ್ಲಿ ಧರ್ಮ ನೆಲೆ ನಿಲ್ಲುವಂತಾಗಲಿ. ಅಲ್ಲಾಹನ ಅನುಗ್ರಹಗಳ ಬಗ್ಗೆ ಕೃತಜ್ಞತೆ ಅರ್ಪಿಸುತ್ತಾ ಇರಬೇಕು. ದುಆ ಇದಾಗಿದೆ: **وَالَّذِينَ يَقُولُونَ رَبَّنَا هَبْ لَنَا مِنْ أَزْوَاجِنَا وَذُرِّيَّاتِنَا قُرَّةَ أَعْيُنٍ** – **ವಲ್ಲಝೀನ ಯಖೂಲೂನ ರಬ್ಬನಾ ಹಬ್‌ಲನಾ ಮಿನ್ ಅಝ್‌ವಾಜಿನಾ ವ ಝುರ್‍ರಿಯಾತಿನಾ ಖುರ್‍ರತ ಅಅ್‌ಯುನಿನ್.** ಅವರು ಪ್ರಾರ್ಥಿಸುತ್ತಾರೆ, ನಮ್ಮ ಪ್ರಭೂ, ನಮ್ಮ ಬಾಳ ಸಂಗಾತಿಗಳನ್ನೂ ನಮ್ಮ ಮಕ್ಕಳನ್ನೂ ನಮಗೆ ನಯನಾಂದಕರವಾಗಿ ಮಾಡು. (ಪವಿತ್ರ ಖುರ್‌ಆನ್ 25:75).

ಹಝ್ರತ್ ಅನಸ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಒಬ್ಬರು ಪವಿತ್ರ ಖುರ್‌ಆನ್ ಉಚ್ಚ ಧ್ವನಿಯಲ್ಲಿ ಪಠಿಸುವ ಶಬ್ದ ಆಲಿಸಿ ಹೇಳಿದರು: ಪವಿತ್ರ ಖುರ್‌ಆನ್ ಪಠಿಸುವ ಈ ವ್ಯಕ್ತಿ ದೇವಭಯ ಭರಿತನಾದವನಾಗಿದ್ದಾನೆ. ಪಠಿಸುತ್ತಿದ್ದ ವ್ಯಕ್ತಿ ಹಝ್ರತ್ ಮಿಖ್‌ದಾದ್ ಆಗಿದ್ದರು.

ಅಲ್ಲಾಹನು ನಮಗೆ ಇಸ್ಲಾಮಿನ ವಾಸ್ತವಿಕತೆಯನ್ನು ಅರಿತುಕೊಳ್ಳುವ ಭಾಗ್ಯ ನೀಡಲಿ. ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯಕ್ಕೆ ಸೇರಿರುವ ಹೊಣೆಗಾರಿಕೆಗಳನ್ನು ಈಡೇರಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ. ನಾವು ನಮ್ಮೊಳಗೆ ಅಲ್ಲಾಹನ ಬಗ್ಗೆ ಭಯವನ್ನು ಹುಟ್ಟಿಸುವ ಭಾಗ್ಯವನ್ನು ದಯಪಾಲಿಸಲಿ – ಆಮೀನ್.

——————————*****——————————

اَلْحَمْدُ لِلّٰهِ نَحمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤمِنُ بِهٖ وَنَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُضْلِلْهُ فَلَا هَادِىَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَاللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَاءِذِى الْقُرْبٰى وَيَنْهٰى
عَنِ الْفَحْشَاءِ وَ الْمُنْكَرِ وَ الْبَغْىِ يَعِظُكُمْ لَعَلَّكُمْ تَذَكَّرُوْنَ
اُذْكُرُوْا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرْ-


***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London, U.K. On 22-11-2019*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email**:* *khutuba.kannada@gmail.com*



**You can find all the Sermons archived at**: www.alislam.org/friday-sermon